**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ**

**ಉಪಸ್ಥಿತರು**

**ಶ್ರೀ ದೀಪು ಎಂ.ಟಿ.** ಬಿ.ಎ.ಎಲ್. ಎಲ್.ಎಲ್.ಬಿ.,

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

**ದಿನಾಂಕ : 17ನೇ ಅಕ್ಟೋಬರ್ ಮಾಹೆ 2025**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 880/2022**

**ಫಿರ್ಯಾದುದಾರರು** : **ಕರ್ನಾಟಕ ರಾಜ್ಯದ ಪರವಾಗಿ**
**ತೆರಕಣಾಂಬಿ ಪೊಲೀಸ್ ಠಾಣೆ**

**[ಪರವಾಗಿ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು]**

**ವಿರುದ್ಧ**

**ಆರೋಪಿತರು** :

1. **ಮಹೇಶ** ಬಿನ್ ಲೇಟ್ ಚಿಕ್ಕಮಾದಪ್ಪ
   47 ವರ್ಷ ವಯಸ್ಸು
2. **ಮಂಜುಳ** ಕೋಂ ಮಹೇಶ
   39 ವರ್ಷ ವಯಸ್ಸು

ಇಬ್ಬರ ವಾಸಃ ಲಕ್ಕೂರು ಗ್ರಾಮ
ಗುಂಡ್ಲುಪೇಟೆ ತಾಲ್ಲೂಕು.

**[ಆರೋಪಿತರ ಪರ ಶ್ರೀ. ಜಿ.ಜಿ , ವಕೀಲರಿಂದ]**

## ವಿ ವ ರ ಣಾ ಪ ಟ್ಟಿ

| | | |
|---|---|---|
| ಅಪರಾಧ ನಡೆದ ದಿನಾಂಕ | : | 20.04.2022 |
| ಅಪರಾಧ ವರದಿಯಾದ ದಿನಾಂಕ | : | 21.04.2022 |
| ಫಿರ್ಯಾದಿ ಹೆಸರು | : | ನಂಜುಂಡಪ್ಪ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 25.06.2025 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 02.09.2025 |
| ಆರೋಪಿಸಲಾದ ಅಪರಾಧಗಳು | : | **ಭಾರತೀಯ ದಂಡ ಸಂಹಿತೆ ಕಲಂ 504, 323, 324, 506 ಸಹವಾಚಕ ಕಲಂ 34** |
| ತೀರ್ಪು ಪ್ರಕಟಿಸಿದ ದಿನಾಂಕ | : | **17.10.2025** |

**(ದೀಪು ಎಂ.ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

## ತೀರ್ಪು

ತೆರಕಣಾಂಬಿ ಆರಕ್ಷಕ ಠಾಣೆಯ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ** 504, 323, 324, 506 **ಸಹವಾಚಕ ಕಲಂ** 34 ರ ಅಡಿಯಲ್ಲಿ ಅಪರಾಧಗಳನ್ನು ಎಸಗಿದ್ದಾರೆಂದು ಆರೋಪಿಸಿರುತ್ತಾರೆ.

## 2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ :

ಚಾಸಾ-1 ರವರ ಮನೆಯವರಿಗೂ ಆರೋಪಿತರಿಗೂ ಜಮೀನಿನ ವಿಚಾರದಲ್ಲಿ ವೈಮನಸ್ಸಿದ್ದು, ದಿನಾಂಕಃ 20.04.2022 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ಪೊಲೀಸ್ ಠಾಣಾ ಸರಹದ್ದಿನ ಲಕ್ಕೂರು ಗ್ರಾಮದ ಚಾಸಾ-4 ರವರ ಜಮೀನಿನಲ್ಲಿ ಚಾಸಾ-1 ರಿಂದ 3 ರವರುಗಳು ಕೆಲಸ ಮಾಡುತ್ತಿದ್ದಾಗ, 1 ಮತ್ತು 2ನೇ ಆರೋಪಿತರು ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು ಚಾಸಾ-2 ರವರ ಮೇಲೆ ಜಗಳ ತೆಗೆದು 1ನೇ ಆರೋಪಿಯು ಚಾಸಾ-2 ರವರಿಗೆ ಬೋಳಿಮಗನೇ, ಸೂಳೇಮಗನೇ ನನ್ನ ಹೊಲದ ಮೇಲೆ ಏಕೆ ಎತ್ತಿನ ಗಾಡಿಯನ್ನು ಹೊಡೆದುಕೊಂಡು ಬಂದೆ ಎಂದು ಬೈಯುತ್ತಿದ್ದಾಗ ಚಾಸಾ-2 ರವರು ನಿಮ್ಮ ಜಮೀನಿನ ತೆವರಿನಲ್ಲಿ ಹೊಡೆದುಕೊಂಡು ಬಂದೆ ಎಂದು ಹೇಳಿದಕ್ಕೆ 1ನೇ ಆರೋಪಿಯು ಬೋಳಿಮಗನೇ ನೀನು ಏಕೆ ಅಲ್ಲಿಂದ ಗಾಡಿಯನ್ನು ಹೊಡೆದುಕೊಂಡು ಬಂದೆ ಎಂದು ಬೈಯುತ್ತಾ ಒಂದು ಮರದ ದೊಣ್ಣೆಯಿಂದ ಚಾಸಾ-2 ರವರ ಬಲ ಕೈಗೆ ಹೊಡೆದಿದ್ದು, ಜಗಳ ಬಿಡಿಸಲು ಬಂದ ಚಾಸಾ-3 ರವರ ಜುಟ್ಟನ್ನು 2ನೇ ಆರೋಪಿಯು ಹಿಡಿದು ಎಳೆದಾಡಿ, ಕೈಗಳಿಂದ ಹೊಡೆದು ಕೆಳಕ್ಕೆ ತಳ್ಳಿ ಚಾಸಾ-3 ರವರಿಗೆ ನೋವುಂಟು ಮಾಡಿರುವುದು ಹಾಗೂ ಚಾಸಾ-2 ರವರಿಗೆ ಸಾಮಾನ್ಯ ಸ್ವರೂಪದ ಗಾಯ ಪಡಿಸಿ ಕೊಲೆ ಬೆದರಿಕೆ ಹಾಕಿರುತ್ತಾರೆಂದು ಚಾಸಾ-1 ರವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಪೂರೈಸಿ ಆರೋಪಿತರು ಮೇಲ್ಕಾಣಿಸಿದ ಅಪರಾಧಗಳನ್ನು ಎಸಗಿದ್ದಾರೆಂದು ಆರೋಪಿಸಲಾಗಿರುತ್ತದೆ.

3. ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಆರೋಪಿತರ ವಿರುದ್ಧ ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ವಕೀಲರ ಮೂಲಕ ಹಾಜರಾಗಿದ್ದು, ಆರೋಪಿತರನ್ನು ಜಾಮೀನಿನ ಮೇಲೆ ಬಿಡಲಾಗಿರುತ್ತದೆ. ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ನಂತರ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಓದಿ ಹೇಳಿ ವಿವರಿಸಲಾಗಿ, ಆರೋಪಿತರು ತಾನು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಯಿತು.

4. ಆರೋಪಿತರ ವಿರುದ್ದದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ಪ್ರಾಸಾ-1 ರಿಂದ 4 ರವರನ್ನು ವಿಚಾರಣೆಗೊಳಪಡಿಸಿಕೊಂಡು, ಸದರಿ ಸಾಕ್ಷಿಗಳಿಂದ ನಿಪಿ-1 ರಿಂದ 8 ಮತ್ತು ಮುದ್ದೆ ಮಾಲು-1 ದೊಣ್ಣೆ ಅನ್ನು ಗುರುತಿಸಿಕೊಂಡು ಅಭಿಯೋಜನೆ ಪರ ವಿಚಾರಣೆ ಮುಕ್ತಾಯಗೊಳಿಸಲಾಗಿರುತ್ತದೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಅವರ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿತರು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಮತ್ತು ಅವರ ಪರವಾಗಿ ಯಾವುದೇ ಸಾಕ್ಷ್ಯ ವಿಚಾರಣೆ ಮಾಡಿಕೊಂಡಿರುವುದಿಲ್ಲ.

6. ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ವಿಚಾರಣೆ ಮಾಡಿದ ನಂತರ, ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ

437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

**7.** ಉಭಯ ಪಕ್ಷಗಳ ವಾದಗಳನ್ನು ಆಲಿಸಲಾಯಿತು. ಕಡತದಲ್ಲಿ ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

**8.** ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ :

**ಅಂ ಶ ಗ ಳು**

**1.** ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ಪೊಲೀಸ್ ಠಾಣಾ ಸರಹದ್ದಿನ ಲಕ್ಕೂರು ಗ್ರಾಮದಲ್ಲಿ ದಿನಾಂಕಃ 20.04.2022 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 3 ರವರು ಚಾಸಾ-4 ರವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, 1 ಮತ್ತು 2ನೇ ಆರೋಪಿಗಳು ಸಮಾನ ಉದ್ದೇಶದಿಂದ ಜಮೀನಿನ ವಿಚಾರದಲ್ಲಿ ಹಳೇ ದ್ವೇಷವನ್ನಿಟ್ಟುಕೊಂಡು ಜಮೀನಿನ ಬಳಿ ಬಂದು, ಆರೋಪಿತರು ಚಾಸಾ-2 ರವರು ಸ್ಥಳದಲ್ಲಿ ಕುಪಿತರಾಗಿ ಶಾಂತಿಭಂಗ ಉಂಟು ಮಾಡುಲೆಂಬ ಉದ್ದೇಶದಿಂದ ಚಾಸಾ-2 ರವರಿಗೆ "ಬೋಳಿಮಗನೇ, ಸೂಳೇಮಗನೇ" ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ. ಆದ್ದರಿಂದ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದೆಯೇ?

**2.** ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರಿಂದ 3 ರವರೊಂದಿಗೆ ಜಮೀನಿನ ವಿಚಾರವಾಗಿ ಜಗಳ ತೆಗೆದು ಗಲಾಟೆ ಮಾಡಿ, ಆ ಪೈಕಿ 1ನೇ

ಆರೋಪಿಯು ಚಾಸಾ–2 ರವರಿಗೆ ಏಕೆ ಎತ್ತಿನಗಾಡಿಯನ್ನು ಹೊಡೆದುಕೊಂಡು ಬಂದೆ ಎಂದು ಬೈಯುತ್ತಿದ್ದಾಗ ಚಾಸಾ–2 ರವರು ನಿಮ್ಮ ಜಮೀನಿನ ತೆವರಿನಲ್ಲಿ ಹೊಡೆದುಕೊಂಡು ಬಂದೆ ಎಂದು ಹೇಳಿದ್ದಕ್ಕೆ 1ನೇ ಆರೋಪಿಯು ಮಾರಕಾಸ್ತ್ರವಾದ ಮರದ ದೊಣ್ಣೆಯಿಂದ ಚಾಸಾ–2 ರವರ ಬಲಗೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದೆಯೇ?

**3.** ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ–1 ರಿಂದ 3 ರವರೊಂದಿಗೆ ಜಮೀನಿನ ವಿಚಾರವಾಗಿ ಜಗಳ ತೆಗೆದು ಗಲಾಟೆ ಮಾಡಿ, 2ನೇ ಆರೋಪಿಯು ಜಗಳ ಬಿಡಿಸಲು ಬಂದ ಚಾಸಾ–3 ರವರ ಜುಟ್ಟನ್ನು ಹಿಡಿದು ಎಳೆದಾಡಿ, ಕೈಗಳಿಂದ ಹೊಡೆದು ಕೆಳಕ್ಕೆ ತಳ್ಳಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದೆಯೇ?

**4.** ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ–1 ರಿಂದ 3 ರವರೊಂದಿಗೆ ಜಮೀನಿನ ವಿಚಾರವಾಗಿ ಜಗಳ ತೆಗೆದು ಗಲಾಟೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ

ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದೆಯೇ?

5. ಏನು ಆದೇಶ?

9. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ :

ಅಂಶ-1 ರಿಂದ 4 : **ನಕಾರಾತ್ಮಕವಾಗಿ,**

ಅಂಶ-5 : ಅಂತಿಮ ಆದೇಶದಂತೆ,

: **ಕಾ ರ ಣ ಗ ಳು :**

10. **ಅಂಶ-**1 **ರಿಂದ 4**: ಈ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಲಾಗಿರುತ್ತದೆ.

11. ಈ ಪ್ರಕರಣದಲ್ಲಿ ಚಾಸಾ-1 ರವರ ಮನೆಯವರಿಗೂ ಆರೋಪಿತರಿಗೂ ಜಮೀನಿನ ವಿಚಾರದಲ್ಲಿ ವೈಮನಸ್ಸಿದ್ದು, ದಿನಾಂಕಃ 20.04.2022 ರಂದು ಚಾಸಾ-4 ರವರ ಜಮೀನಿನಲ್ಲಿ ಚಾಸಾ-1 ರಿಂದ 3 ರವರುಗಳು ಕೆಲಸ ಮಾಡುತ್ತಿದ್ದಾಗ, 1 ಮತ್ತು 2ನೇ ಆರೋಪಿತರು ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು ಚಾಸಾ-2 ರವರ ಮೇಲೆ ಜಗಳ ತೆಗೆದು 1ನೇ ಆರೋಪಿಯು ಚಾಸಾ-2 ರವರಿಗೆ ಬೋಳಿಮಗನೇ, ಸೂಳೇಮಗನೇ ನನ್ನ ಹೊಲದ ಮೇಲೆ ಏಕೆ ಎತ್ತಿನ ಗಾಡಿಯನ್ನು ಹೊಡೆದುಕೊಂಡು ಬಂದೆ ಎಂದು ಬೈಯುತ್ತಿದ್ದಾಗ ಚಾಸಾ-2 ರವರು ನಿಮ್ಮ ಜಮೀನಿನ ತೆವರಿನಲ್ಲಿ ಹೊಡೆದುಕೊಂಡು ಬಂದೆ ಎಂದು ಹೇಳಿದಕ್ಕೆ 1ನೇ ಆರೋಪಿಯು

ಬೋಳಿಮಗನೇ ನೀನು ಏಕೆ ಅಲ್ಲಿಂದ ಗಾಡಿಯನ್ನು ಹೊಡೆದುಕೊಂಡು ಬಂದೆ ಎಂದು ಬೈಯುತ್ತಾ ಒಂದು ಮರದ ದೊಣ್ಣೆಯಿಂದ ಚಾಸಾ-2 ರವರ ಬಲ ಕೈಗೆ ಹೊಡೆದಿದ್ದು, ಜಗಳ ಬಿಡಿಸಲು ಬಂದ ಚಾಸಾ-3 ರವರ ಜುಟ್ಟನ್ನು 2ನೇ ಆರೋಪಿಯು ಹಿಡಿದು ಎಳೆದಾಡಿ, ಕೈಗಳಿಂದ ಹೊಡೆದು ಕೆಳಕ್ಕೆ ತಳ್ಳಿ ಚಾಸಾ-3 ರವರಿಗೆ ನೋವುಂಟು ಮಾಡಿರುವುದು ಹಾಗೂ ಚಾಸಾ-2 ರವರಿಗೆ ಸಾಮಾನ್ಯ ಸ್ವರೂಪದ ಗಾಯ ಪಡಿಸಿ ಕೊಲೆ ಬೆದರಿಕೆ ಹಾಕಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರ ಸಲ್ಲಿಸಿರುವುದು ಕಂಡುಬರುತ್ತದೆ. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತು ಪಡಿಸುವ ಸಲುವಾಗಿ ಚಾಸಾ-1 ರಿಂದ 3 ರವರನ್ನು ಪ್ರಾಸಾ-2 ರಿಂದ 4 ಎಂದು, ಚಾಸಾ-7 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಸದರಿ ಸಾಕ್ಷಿಗಳ ಮೂಲಕ ನಿಪಿ-1 ರಿಂದ 8 ರಂತೆ ದಾಖಲೆಗಳನ್ನು ನಿಪಿ-1 ದೂರು, ನಿಪಿ-1(ಎ) ಸಾಕ್ಷಿದಾರರ ಸಹಿ, ನಿಪಿ-2 ಪ್ರಥಮ ವರ್ತಮಾನ ವರದಿ, ನಿಪಿ-2(ಎ) ಸಾಕ್ಷಿದಾರರ ಸಹಿ, ನಿಪಿ-3 ಸ್ಥಳ ಮಹಜರ್, ನಿಪಿ-3(ಎ) ಸಾಕ್ಷಿದಾರರ ಸಹಿ, ನಿಪಿ-4 ಗಾಯದ ಪ್ರಮಾಣ ಪತ್ರ, ನಿಪಿ-4(ಎ) ಸಾಕ್ಷಿದಾರರ ಸಹಿ, ನಿಪಿ-5 ಛಾಯಾಚಿತ್ರ, ನಿಪಿ-6 ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿನ ಪ್ರಮಾಣ ಪತ್ರ, ನಿಪಿ-6(ಎ) ಸಾಕ್ಷಿದಾರರ ಸಹಿ, ನಿಪಿ-7 ಮತ್ತು ನಿಪಿ-8 ಸಾಕ್ಷಿದಾರರ ಹೇಳಿಕೆಗಳು ಹಾಗೂ ಮುದ್ದೆ ಮಾಲು-1 ದೊಣ್ಣೆಯನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ. ಸದರಿ ಸಾಕ್ಷಿಗಳನ್ನು ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿಕೊಂಡಿರುತ್ತಾರೆ.

**12.** ಈ ಮೇಲ್ಕಂಡಂತೆ ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳು, ಕಾನೂನು ಪರಿಕಲ್ಪನೆಗಳು ಹಾಗೂ

ಆರೋಪಿಗಳು ತೆಗೆದುಕೊಂಡಿರುವ ಪ್ರತಿರಕ್ಷಣೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ದೂರುದಾರರಾದ ಫ್ರಾಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು ತನ್ನ ಸಂಬಂದಿಕರು, ಚಾಸಾ-2 ತನ್ನ ಮಗ, ಚಾಸಾ-3 ತನ್ನ ಹೆಂಡತಿ, ಚಾಸಾ-4 ಗೊತ್ತು ಎಂದು ನಿಪಿ 1 ದೂರು ಮತ್ತು ನಿಪಿ 3 ಪಂಚನಾಮೆಯಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತನ್ನು ಯಾವಾಗ ಎಲ್ಲಿ ಮಾಡಿದ್ದೇನೆ ತನಗೆ ಗೊತ್ತಿಲ್ಲ. ಆರೋಪಿಗಳ ವಿರುದ್ಧ ತಾನು ಯಾವುದೇ ದೂರು ನೀಡಿಲ್ಲ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಆರೋಪಿಗಳು ತನಗೆ ಅಕ್ರಮ ಪ್ರತಿಬಂಧ ಉಂಟು ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ ಸಾಕ್ಷಿ ನೀಡಿದ್ದಾರೆ ಎನ್ನಲಾದ ನಿಪಿ-1 ದೂರು ಮತ್ತು ಸಾಕ್ಷಿಯ ಸಮಕ್ಷಮ ಜರುಗಿಸಿಲಾಗಿದೆ ಎನ್ನಲಾದ ನಿಪಿ-2 ಪಂಚನಾಮೆಯ ಸಂಪೂರ್ಣ ಅಂಶಗಳನ್ನು ಓದಿ, ಹೇಳಿ, ಕೇಳಿದಾಗ್ಯೂ ಸಹ ಸದರಿ ಸಾಕ್ಷಿಯಿಂದ ಅಭಿಯೋಜನೆಗೆ ಪೂರಕವಾದ ಯಾವುದೇ ಒಪ್ಪಿಗೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ. ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಅಭಿಯೋಜನೆಯ ಪ್ರಕರಣದಂತೆ ಫ್ರಾಸಾ.2 ರವರು ನೀಡಿದ ನಿಪಿ-1 ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ನಿಪಿ-3 ರಂತೆ ಸ್ಥಳ ಪಂಚನಾಮೆ ಜರುಗಿಸಿಲಾಗಿದೆ ಎಂಬುದಾಗಿರುತ್ತದೆ. ಆದರೆ, ಫ್ರಾಸಾ-2 ರವರು ನಿಪಿ-1 ದೂರು ಮತ್ತು ನಿಪಿ-3 ಸ್ಥಳ ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು

ಕಂಡುಬರುತ್ತದೆ. ಹಾಗಾಗಿ ಫ್ರಾಸಾ–1 ರವರು ನಿಪಿ–1 ರಂತೆ ದೂರು ನೀಡಿದ ಮೇರೆಗೆ ಫ್ರಾಸಾ–1 ರವರು ತೋರಿಸಿದ ಸ್ಥಳದಲ್ಲಿ ನಿಪಿ–3 ರಂತೆ ಪಂಚನಾಮೆ ಕ್ರಮ ಜರುಗಿಸಲಾಗಿದೆ ಎಂಬ ಅಂಶವನ್ನು ಸಾಬೀತು ಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಅಭಿಯೋಜನೆ ಆರೋಪಿಸಿರುವಂತೆ ಆರೋಪಿ ಕೃತ್ಯ ಎಸಗಿದ್ದಾರೆ ಎಂಬ ಕುರಿತಾಗಿ ಫ್ರಾಸಾ–1 ರವರು ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಸದರಿ ಅಂಶವು ಅಭಿಯೋಜನೆ ಪ್ರಕರಣಕ್ಕೆ ಹಿನ್ನಡೆಯನ್ನುಂಟು ಮಾಡಿರುತ್ತದೆ.

**13.** ಈ ಪ್ರಕರಣದಲ್ಲಿ ಗಾಯಾಳು ಮತ್ತು ಸಾಕ್ಷಿಯಾದ ಫ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು ಗೊತ್ತು, ಆರೋಪಿಗಳು ತನ್ನ ಸಂಬಂದಿಕರು. ಚಾಸಾ–1 ತನ್ನ ತಂದೆ, ಚಾಸಾ–3 ತನ್ನ ತಾಯಿ. ಚಾಸಾ–4 ಗೊತ್ತು. ಚಾಸಾ–1 ರವರು ಆರೋಪಿಗಳ ವಿರುದ್ಧ ದೂರು ನೀಡಿರುವ ವಿಚಾರಗಳು ತನಗೆ ಗೊತ್ತಿಲ್ಲ. ಆರೋಪಿಗಳು ತನಗೆ ಅಕ್ರಮ ಪ್ರತಿಬಂಧ ಉಂಟು ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರು ತನ್ನನ್ನು ವಿಚಾರಣೆ ಮಾಡಿಲ್ಲ, ತಾನು ಯಾವುದೇ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ ಸಾಕ್ಷಿ ನೀಡಿದ್ದಾರೆ ಎನ್ನಲಾದ ನಿಪಿ–7 ರ ಹೇಳಿಕೆಯ ಸಂಪೂರ್ಣ ಅಂಶಗಳನ್ನು ಓದಿ, ಹೇಳಿ, ಕೇಳಿದಾಗ್ಯೂ ಸಹ ಸದರಿ ಸಾಕ್ಷಿಯಿಂದ ಅಭಿಯೋಜನೆಗೆ ಪೂರಕವಾದ ಯಾವುದೇ ಒಪ್ಪಿಗೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ. ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ.

ಅಭಿಯೋಜನೆಯ ಪ್ರಕರಣದಂತೆ ಫ್ರಾಸಾ.3 ರವರಿಗೂ ಸಹ ಆರೋಪಿಗಳು ಅವಾಚ್ಯ ಶಬ್ಧಗಳಿಂದ ಬೈದು, ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದಾರೆ ಹಾಗೂ ಫ್ರಾಸಾ-3 ರವರು ನಿಪಿ.7 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ ಎಂಬುದಾಗಿರುತ್ತದೆ. ಆದರೆ ಫ್ರಾಸಾ-3 ರವರು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ನಿಪಿ-7 ರ ಹೇಳಿಕೆಗೆ ವ್ಯತಿರಿಕ್ತ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಹಾಗಾಗಿ ಫ್ರಾಸಾ-3 ರವರು ಅಭಿಯೋಜನೆಯು ಆರೋಪಿಸಿರುವಂತೆ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂಬುದರ ಕುರಿತಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಆದ್ದರಿಂದ ಫ್ರಾಸಾ-3 ರವರ ಸಾಕ್ಷ್ಯದಿಂದ ಅಭಿಯೋಜನೆ ಆರೋಪಿಸಿರುವಂತೆ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂದು ಸಾಬೀತು ಪಡಿಸಲು ಅಭಿಯೋಜನೆಗೆ ಫ್ರಾಸಾ-3 ರವರ ಸಾಕ್ಷ್ಯವು ಯಾವುದೇ ಸಹಕಾರವಾಗಿರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

**14.** ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿ ಎನ್ನಲಾದ ಫ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು ಗೊತ್ತು, ಆರೋಪಿಗಳು ತನ್ನ ಸಂಬಂದಿಕರು. ಚಾಸಾ-1 ತನ್ನ ಗಂಡ, ಚಾಸಾ 2 ತನ್ನ ಮಗ. ಚಾಸಾ 4 ಗೊತ್ತು. ಚಾಸಾ 1 ರವರು ಆರೋಪಿಗಳ ವಿರುದ್ಧ ದೂರು ನೀಡಿರುವ ವಿಚಾರಗಳು ತನಗೆ ಗೊತ್ತಿಲ್ಲ. ಆರೋಪಿಗಳು ತನಗೆ ಅಕ್ರಮ ಪ್ರತಿಬಂಧ ಉಂಟು ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರು ತನ್ನನ್ನು ವಿಚಾರಣೆ ಮಾಡಿಲ್ಲ, ತಾನು ಯಾವುದೇ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ

ಸಾಕ್ಷಿ ನೀಡಿದ್ದಾರೆ ಎನ್ನಲಾದ ನಿಪಿ–8 ರ ಹೇಳಿಕೆಯ ಸಂಪೂರ್ಣ ಅಂಶಗಳನ್ನು ಓದಿ, ಹೇಳಿ, ಕೇಳಿದಾಗ್ಯೂ ಸಹ ಸದರಿ ಸಾಕ್ಷಿಯಿಂದ ಅಭಿಯೋಜನೆಗೆ ಪೂರಕವಾದ ಯಾವುದೇ ಒಪ್ಪಿಗೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ. ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಅಭಿಯೋಜನೆಯ ಪ್ರಕರಣದಂತೆ ಫ್ರಾಸಾ.3 ರವರಿಗೂ ಸಹ ಆರೋಪಿಗಳು ಅವಾಚ್ಯ ಶಬ್ಧಗಳಿಂದ ಬೈದು, ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದಾರೆ ಹಾಗೂ ಫ್ರಾಸಾ–4 ರವರು ನಿಪಿ.7 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ ಎಂಬುದಾಗಿರುತ್ತದೆ. ಆದರೆ ಫ್ರಾಸಾ–3 ರವರು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ನಿಪಿ–8 ರ ಹೇಳಿಕೆಗೆ ವ್ಯತಿರಿಕ್ತ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಹಾಗಾಗಿ ಫ್ರಾಸಾ–4 ರವರು ಅಭಿಯೋಜನೆಯು ಆರೋಪಿಸಿರುವಂತೆ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂಬುದರ ಕುರಿತಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಆದ್ದರಿಂದ ಫ್ರಾಸಾ–4 ರವರ ಸಾಕ್ಷ್ಯದಿಂದ ಅಭಿಯೋಜನೆ ಆರೋಪಿಸಿರುವಂತೆ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂದು ಸಾಬೀತು ಪಡಿಸಲು ಅಭಿಯೋಜನೆಗೆ ಫ್ರಾಸಾ–4 ರವರ ಸಾಕ್ಷ್ಯವು ಯಾವುದೇ ಸಹಕಾರವಾಗಿರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

**15.** ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಫ್ರಾಸಾ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 21.04.2022 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ–2 ರವರು ಠಾಣೆಗೆ ಹಾಜರಾಗಿ ನಿಪಿ–1 ರಂತೆ ಒಂದು ಲಿಖಿತ ದೂರನ್ನು ನೀಡಿದ್ದು, ಅದನ್ನು

ಸ್ವೀಕರಿಸಿ ಪ್ರಕರಣ ದಾಖಲಿಸಿ ನಿಪಿ–2 ರಂತೆ ಪ್ರ.ವ.ವ ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮರುದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ರವರು ತೋರಿಸಿದ ಸ್ಥಳದಲ್ಲಿ ಚಾಸಾ 3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 3.00 ರಿಂದ 3.45 ಗಂಟೆಯವರೆಗೆ ನಿಪಿ–3 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮುದ್ದೆ ಮಾಲು 1 ಅನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ 3 ಮತ್ತು 4 ರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿನಾಂಕಃ 13.06.2022 ರಂದು ಆರೋಪಿಗಳು ಠಾಣೆಗೆ ಹಾಜರಾದ ಮೇರೆಗೆ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ. ದಿನಾಂಕಃ 13.06.2022 ರಂದು ನಿಪಿ–4 ರಂತೆ ಗಾಯದ ಪ್ರಮಾಣ ಪತ್ರವನ್ನು ವೈದ್ಯರಿಂದ ಸ್ವೀಕರಿಸಿರುತ್ತೇನೆ. ಕೃತ್ಯ ಸ್ಥಳದಲ್ಲಿ ಫೋಟೋ ತೆಗೆಸಿರುತ್ತೇನೆ ಹಾಗೂ ಕಲಂ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡು ಆರೋಪಿಯ ವಿರುದ್ಧ ಆರೋಪ ಕಂಡುಬಂದ ಕಾರಣ ದೋಷಾರೋಪಣಾ ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ ಸೂಚಿಸಿರುವ ಅಂಶಗಳಿಗೆ ಸರಿ ಎಂದು ಉತ್ತರಿಸಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀಸವಾಲಿನಲ್ಲಿ, ತಾನು ಯಾವುದೇ ಸಾಕ್ಷಿದಾರರ ಮತ್ತು ಗಾಯಾಳುಗಳ ಹೇಳಿಕೆಗಳು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ

ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಫ್ರಾಸಾ-1 ರವರ ಸಾಕ್ಷ್ಯದಂತೆ ಫ್ರಾಸಾ-2 ರವರು ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಪಂಚನಾಮೆ ಜರುಗಿಸಿ ಮುದ್ದೆ ಮಾಲು-1 ಅನ್ನು ಅಮಾನತ್ತು ಪಡಿಸಿಕೊಂಡು, ಗಾಯದ ಪ್ರಮಾಣ ಪತ್ರ ಸ್ವೀಕರಿಸಿ, ದೋಷಾರೋಪಣಾ ಪತ್ರ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಅಂಶವನ್ನು ಆರೋಪಿ ಪರ ವಕೀಲರು ತಳ್ಳಿ ಹಾಕಿರುತ್ತಾರೆ. ಫ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ತಮಗೆ ಗಾಯಗಳು ಉಂಟಾಗಿರುವುದರ ಬಗ್ಗೆಯಾಗಲೀ ಅಥವಾ ಚಿಕಿತ್ಸೆ ಪಡೆದಿರುವುದರ ಬಗ್ಗೆಯಾಗಲೀ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಜೊತೆಗೆ ಫ್ರಾಸಾ-2 ರವರು ಪಂಚನಾಮೆಗೆ ಸ್ಥಳ ತೋರಿಸಿದ ಬಗ್ಗೆಯಾಗಲೀ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಆದ್ದರಿಂದ ತನಿಖಾಧಿಕಾರಿಯಾದ ಫ್ರಾಸಾ-1 ರವರು ದೂರು ಸ್ವೀಕರಿಸಿ ಗಾಯದ ಪ್ರಮಾಣ ಪತ್ರ ಸ್ವೀಕರಿಸಿ ಪ್ರಕರಣ ದಾಖಲಿಸಿ ತನಿಖೆ ಪೂರೈಸಿ ದೋಷಾರೋಪಣಾ ಪತ್ರ ಸಲ್ಲಿಸಿರುವುದಾಗಿ ಸಾಕ್ಷನುಡಿದಿದ್ದರೂ ಸಹ, ಸ್ವತಃ ದೂರುದಾರರಾದ ಫ್ರಾಸಾ-2 ರವರು ದೂರು ನೀಡಿರುವುದರ ಬಗ್ಗೆಯಾಗಲೀ, ಸ್ಥಳ ಪಂಚನಾಮೆಯಲ್ಲಿ ಸ್ಥಳ ತೋರಿಸಿರುವುದರ ಬಗ್ಗೆಯಾಗಲೀ ಹಾಗೂ ಮುದ್ದೆ ಮಾಲು-1 ಅನ್ನು ಸ್ಥಳ ಪಂಚನಾಮೆ ಸಮಯದಲ್ಲಿ ತನಿಖಾಧಿಕಾರಿಗೆ ನೀಡಿರುವುದರ ಬಗ್ಗೆಯಾಗಲೀ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಹಾಗಾಗಿ ಫ್ರಾಸಾ-1 ರವರ ಸಾಕ್ಷ್ಯ ಮತ್ತು ಫ್ರಾಸಾ-2 ರವರ ಸಾಕ್ಷ್ಯ ಒಂದಕ್ಕೊಂದು ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ತನಿಖಾಧಿಕಾರಿಯು ಆರೋಪಿತರು ತಪ್ಪಿತಸ್ಥರೆಂದು ದೋಷಾರೋಪಣಾ ಪತ್ರ ಸಲ್ಲಿಸಿದ್ದರೂ ಸಹ ಸ್ವತಃ ದೂರುದಾರರಾದ ಫ್ರಾಸಾ-2 ರವರು ಮತ್ತು ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿಯಾದ ಫ್ರಾಸಾ-3 ಮತ್ತು 4 ರವರು ತನಿಖಾಧಿಕಾರಿಯ ಸಾಕ್ಷ್ಯಕ್ಕೆ ವ್ಯತಿರಿಕ್ತವಾಗಿ

ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಸದರಿ ಅಂಶವು ಅಭಿಯೋಜನೆಯ ಪ್ರಕರಣದಲ್ಲಿ ಸಂಶಯಕ್ಕೆ ಎಡೆಮಾಡಿಕೊಡುತ್ತದೆ.

**16.** ಒಟ್ಟಾರೆಯಾಗಿ, ಈ ಪ್ರಕರಣದಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ವಿಮರ್ಶಿಸಿ ನೋಡಿದಾಗ ಆರೋಪಿಗಳು ಫ್ರಾಸಾ–2 ರಿಂದ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಜೀವ ಬೆದರಿಕೆ ಹಾಕಿದ್ದಾರೆಂದು ಆರೋಪಿಸಿರುವುದು ಕಂಡುಬರುತ್ತದೆ. ಆದರೆ, ಸ್ವತಃ ದೂರುದಾರರಾದ ಫ್ರಾಸಾ–2 ಮತ್ತು ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿಯಾದ ಫ್ರಾಸಾ–3 ಮತ್ತು ಫ್ರಾಸಾ–4 ರವರು ಅಭಿಯೋಜನೆಯ ಪ್ರಕರಣವನ್ನು ಪುಷ್ಠೀಕರಿಸಿ ಆರೋಪಿಗಳು ತಮಗೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುವುದರ ಕುರಿತಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ತನಿಖಾಧಿಕಾರಿಯಾದ ಫ್ರಾಸಾ–1 ರವರು ಮಾತ್ರ ಅಭಿಯೋಜನೆಯ ಪ್ರಕರಣವನ್ನು ಪುಷ್ಠೀಕರಿಸಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಫ್ರಾಸಾ–1 ರವರ ಸಾಕ್ಷ್ಯವನ್ನು ಪುಷ್ಠೀಕರಿಸುವಂತೆ ಫ್ರಾಸಾ–2 ರಿಂದ 4 ರವರು ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ. ಹಾಗಾಗಿ ಅಭಿಯೋಜನೆ ಹಾಜರು ಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳು ಒಂದಕ್ಕೊಂದು ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆ ಆರೋಪಿಸಿರುವಂತೆ ಆರೋಪಿಗಳು ಫ್ರಾಸಾ–2 ರಿಂದ 4 ರವರಿಗೆ ಕೈ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ್ದಾರೆಂಬ ಅಂಶವನ್ನು ನಿಸ್ಸಂಶಯವಾಗಿ ಸಾಬೀತು ಪಡಿಸಲು ಅಭಿಯೋಜನೆಯು ಸಂಪೂರ್ಣ ಸಾಕ್ಷ್ಯಧಾರಗಳನ್ನು ಹಾಜರು ಪಡಿಸಿರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ. ಹಾಗಾಗಿ ಅಭಿಯೋಜನೆಯ

ಪ್ರಕರಣವು ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಸದರಿ ಸಂಶಯದ ಲಾಭವನ್ನು 1 ಮತ್ತು 2ನೇ ಆರೋಪಿತರು ಪಡೆಯಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು **ಅಂಶ–1 ರಿಂದ 4 ಕ್ಕೆ ನಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

17. **ಅಂಶ–5** : ಅಂಶ–1 ರಿಂದ 4ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ 1 ಮತ್ತು 2ನೇ ಆರೋಪಿತರ ವಿರುದ್ಧ ಹೊರಿಸಿದ **ಭಾರತೀಯ ದಂಡ ಸಂಹಿತೆ ಕಲಂ 504, 323, 324, 506 ಸಹವಾಚಕ ಕಲಂ 34** ರ ಅಡಿಯಲ್ಲಿನ ಆರೋಪಗಳಿಂದ 1 ಮತ್ತು 2ನೇ ಆರೋಪಿತರನ್ನು ಖುಲಾಸೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ 1 ಮತ್ತು 2ನೇ ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆ ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ 1 ಮತ್ತು 2ನೇ ಆರೋಪಿತರು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆ ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ

ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಯು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಈ ಪ್ರಕರಣದ ಮುದ್ದೆ ಮಾಲು-1 ದೊಣ್ಣೆ ಬೆಲೆಬಾಳದ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರು ಉಕ್ತೀಕರಿಸಿ, ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ **ದಿನಾಂಕ 17ನೇ ಅಕ್ಟೋಬರ್** 2025 ರಂದು ಉದ್ಘೋಷಿಸಿದ್ದೇನೆ)

**(ದೀಪು ಎಂ.ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

## ಅ ನು ಬಂ ಧ

### 1. ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ:

ಫ್ರಾಸಾ – 1 : ಮಹದೇವಸ್ವಾಮಿ ಆರ್
ಫ್ರಾಸಾ – 2 : ನಂಜುಂಡಪ್ಪ
ಫ್ರಾಸಾ – 3 : ಮರಿಸ್ವಾಮಿ
ಫ್ರಾಸಾ – 4 : ಅಕ್ಕಮಹಾದೇವಿ

### 2. ಅಭಿಯೋಜನೆಯವರು ನಿಶಾನೆಯಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ:

ನಿಪಿ – 1 : ದೂರು
ನಿಪಿ – 1(ಎ) : ಸಾಕ್ಷಿದಾರರ ಸಹಿ
ನಿಪಿ – 2 : ಪ್ರಥಮ ವರ್ತಮಾನ ವರದಿ

| | |
|---|---|
| ನಿಪಿ – 2(ಎ) | : ಸಾಕ್ಷಿದಾರರ ಸಹಿ |
| ನಿಪಿ – 3 | : ಸ್ಥಳ ಮಹಜರ್ |
| ನಿಪಿ – 3(ಎ) | : ಸಾಕ್ಷಿದಾರರ ಸಹಿ |
| ನಿಪಿ – 4 | : ಗಾಯದ ಪ್ರಮಾಣ ಪತ್ರ |
| ನಿಪಿ – 4(ಎ) | : ಸಾಕ್ಷಿದಾರರ ಸಹಿ |
| ನಿಪಿ – 5 | : ಛಾಯಾಚಿತ್ರ |
| ನಿಪಿ – 6 | : ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿನ ಪ್ರಮಾಣ ಪತ್ರ |
| ನಿಪಿ – 6(ಎ) | : ಸಾಕ್ಷಿದಾರರ ಸಹಿ |
| ನಿಪಿ – 7 | : ಗಾಯಾಳು ಹೇಳಿಕೆ |
| ನಿಪಿ – 8 | : ಸಾಕ್ಷಿದಾರರ ಹೇಳಿಕೆ |

3. **ಅಭಿಯೋಜನೆಯು ಮುದ್ದೆ ಮಾಲಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ:**

| | |
|---|---|
| ಮುದ್ದೆಮಾಲು–1 | : ದೊಣ್ಣೆ |

4. **ಆರೋಪಿತರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ: –ಇಲ್ಲ–**

5. **ಆರೋಪಿತರು ನಿಶಾನೆಯಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ: –ಇಲ್ಲ–**

**(ದೀಪು ಎಂ.ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ**

Visit **ecourts.gov.in** for updates or download mobile app "**eCourts Services**" from Android or iOS